# ಅಂತು ಇಂತು ಬಂತು ನಮ್ಮ ಬಿಎಂಟಿಸಿ

■ **ಶಶಿಕುಮಾರ್ ಸಿ.**

ರಾಜ್ಯದ ಮೂಲೆ ಮೂಲೆಯ ಜನರು ನೆಲೆಸಿರುವ ರಾಜಧಾನಿ ಬೆಂಗಳೂರಿನ ನಾಡಿಮಿಡಿತ ಬಿಎಂಟಿಸಿ(ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ). ಬಿಎಂಟಿಸಿಯ 'ನಮ್ಮ ಬಿಎಂಟಿಸಿ' ಬಸ್ ಟ್ರ್ಯಾಕಿಂಗ್ ಆ್ಯಪ್, ಹಲವು ವರ್ಷಗಳ ಕಾಯುವಿಕೆ ನಂತರ ಕೊನೆಗೂ ಬಿಡುಗಡೆಗೊಂಡಿದೆ.

ಪ್ರಯಾಣಿಕರ ಅನುಕೂಲಕ್ಕಾಗಿ ಈ ಆ್ಯಪ್ ಅಭಿವೃದ್ಧಿಪಡಿಸಿರುವ ಬಿಎಂಟಿಸಿಯು, ಈಚೆಗೆ ಆ್ಯಪ್ ಲೈವ್ ಮಾಡಿದೆ. ಆ್ಯಂಡ್ರಾಯ್ಡ್ ಮತ್ತು ಐಒಎಸ್ ಪ್ಲಾಟ್‌ಫಾರ್ಮ್‌ಗಳಲ್ಲಿ 'ನಮ್ಮ ಬಿಎಂಟಿಸಿ' (Namma BMTC) ಲಭ್ಯವಿದ್ದು ಪ್ರಯಾಣಿಕರು ಇದನ್ನು ಉಚಿತವಾಗಿ ಡೌನ್‌ಲೋಡ್ ಮಾಡಿಕೊಳ್ಳಬಹುದು. ಆ್ಯಪ್ ಬಳಸಿ ಬಿಎಂಟಿಸಿ ಬಸ್ ಇರುವ ಜಾಗವನ್ನು ಟ್ರ್ಯಾಕ್ ಮಾಡಬಹುದಾಗಿದೆ. ಅದಕ್ಕಾಗಿ ಪ್ರತಿ ಬಸ್‌ನಲ್ಲಿ ಜಿಪಿಎಸ್ ಉಪಕರಣ ಅಳವಡಿಸಲಾಗಿದೆ.

ಬೀಟಾ ಪರೀಕ್ಷೆಯ ಹಂತದಲ್ಲಿದ್ದಾಗ 'ನಿಮ್ ಬಸ್' (NIMBUS) ಆಗಿದ್ದ ಈ ಆ್ಯಪ್ ಸದ್ಯ 'ನಮ್ಮ ಬಿಎಂಟಿಸಿ' ಎಂದು ಹೆಸರು ಬದಲಿಸಿಕೊಂಡಿದೆ. ಕನ್ನಡ ಮತ್ತು ಇಂಗ್ಲಿಷ್ ಎರಡೂ ಭಾಷೆಗಳಲ್ಲಿ ಲಭ್ಯವಿರುವ ಆ್ಯಪ್‌ನಲ್ಲಿ, ಭಾಷೆ ಬದಲಾಯಿಸಲು ಸರಳವಾದ ಆಯ್ಕೆಯನ್ನೂ ನೀಡಲಾಗಿದೆ. ಸೈನ್ ಇನ್ ಅಥವಾ ಗೆಸ್ಟ್ ಯೂಸರ್ ಆಗಿಯೂ ಪ್ರಯಾಣಿಕರು ಆ್ಯಪ್ ಬಳಸಬಹುದು. ಎಸ್‌ಒಎಸ್, ವಿಶ್ವಾಸಾರ್ಹ ಸಂಪರ್ಕ, ನೋಟಿಫಿಕೇಷನ್ ಅಲರ್ಟ್ ಮತ್ತು ಪ್ರೊಫೈಲ್‌ಗಳಂತಹ ಹಲವು ವಿಶೇಷ ಫೀಚರ್‌ಗಳು ಆ್ಯಪ್‌ನಲ್ಲಿ ಲಭ್ಯವಿದ್ದು, ಸೈನ್ ಇನ್ ಆದವರಿಗೆ ಮಾತ್ರ ಇವು ಲಭ್ಯ.

ಬಳಕೆದಾರಸ್ನೇಹಿ ಇಂಟರ್‌ಫೇಸ್ ಮತ್ತು ರಿಯಲ್ ಟೈಮ್ ಟ್ರ್ಯಾಕಿಂಗ್, ಹತ್ತಿರದ ನಿಲ್ದಾಣಗಳ ಮಾಹಿತಿ, ಪ್ರಯಾಣದ ಯೋಜನೆ ಮತ್ತು ಇತರ ಹಲವು ಪ್ರಮುಖ ಫೀಚರ್‌ಗಳೊಂದಿಗೆ ನ್ಯಾವಿಗೇಟ್ ಮಾಡಲು ಸುಲಭವಾಗುವಂತೆ ಆ್ಯಪ್ ರೂಪಿಸಲಾಗಿದೆ. ತುರ್ತು ಸಂದರ್ಭಗಳಲ್ಲಿ ಬಳಕೆದಾರರಿಗೆ ನೆರವಾಗಲು ಎಸ್‌ಒಎಸ್ ಫೀಚರ್ ಕಲ್ಪಿಸಿದ್ದರೆ, ಬಿಎಂಟಿಸಿ ಸಹಾಯವಾಣಿಗಳನ್ನು ಸುಲಭವಾಗಿ ಸಂಪರ್ಕಿಸಲು ಇಂಟರ್‌ಲಿಂಕ್ ಮಾಡಲಾಗಿದೆ.

ವಾಹನ ನಿಲುಗಡೆ, ವಿಶ್ರಾಂತಿ ಕೊಠಡಿಗಳು, ಸ್ವಯಂಚಾಲಿತ ಟೆಲ್ಲರ್ ಯಂತ್ರಗಳು (ಎಟಿಎಂಗಳು), ಕುಡಿಯುವ ನೀರಿನ ಸೌಲಭ್ಯ, ನಿರ್ದಿಷ್ಟ ಬಸ್ ನಿಲ್ದಾಣಗಳು, ಟ್ರಾಫಿಕ್ ಮತ್ತು ಟ್ರಾನ್ಸಿಟ್ ಮ್ಯಾನೇಜ್‌ಮೆಂಟ್ ಸೆಂಟರ್




(ಟಿಟಿಎಂಸಿಗಳು) ಒದಗಿಸುವ ಸೌಲಭ್ಯಗಳನ್ನು ಆ್ಯಪ್ ಹೊಂದಿದೆ.

'ಸಮೀಪದ ನಿಲ್ದಾಣಗಳು' ಫೀಚರ್ ಬಳಸಿಕೊಂಡು, ಬಳಕೆದಾರರು ಬಿಎಂಟಿಸಿ, ಚಾರ್ಟರ್ಡ್ ಬಸ್‌ಗಳು, ನಮ್ಮ ಮೆಟ್ರೊ ಮತ್ತು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ (KSRTC) ಬಸ್‌ಗಳ ನಿಲ್ದಾಣಗಳನ್ನು ತಿಳಿದುಕೊಳ್ಳಬಹುದು. 'ಶುಲ್ಕ ಕ್ಯಾಲ್ಕುಲೇಟರ್' ಆಯ್ಕೆಯನ್ನೂ ಶೀಘ್ರದಲ್ಲೇ ಆ್ಯಪ್‌ಗೆ ಸೇರಿಸಲಾಗುತ್ತದೆ ಎಂದು ಬಿಎಂಟಿಸಿ ತಿಳಿಸಿದೆ. ■

---

## ಟ್ವಿಟರ್ ಖಾತೆ ಬ್ಲೂಟಿಕ್ ಕಣ್ಮರೆ

ಟ್ವಿಟರ್‌ನಲ್ಲಿ ಇಷ್ಟುದಿನ ಉಚಿತವಾಗಿ ಬ್ಲೂಟಿಕ್ ಆಯ್ಕೆ ಬಳಸುತ್ತಿದ್ದ ದೇಶದ ಹಲವು ದಿಗ್ಗಜರಿಗೆ ಕಂಪನಿಯು ಶಾಕ್ ನೀಡಿದ್ದು, ಯಾವುದೇ ಸೂಚನೆ ನೀಡದೆ ಬ್ಲೂಟಿಕ್ ಆಯ್ಕೆ ತೆಗೆದಿದೆ. ದಿಗ್ಗಜರ ಖಾತೆಗಳೀಗ ಸಾಮಾನ್ಯರ ಖಾತೆಗಳಂತಾಗಿವೆ.

ಸಚಿನ್ ತೆಂಡೂಲ್ಕರ್, ವಿರಾಟ್ ಕೊಹ್ಲಿ, ರೋಹಿತ್ ಶರ್ಮಾ ಸೇರಿದಂತೆ ಹಲವು ಕ್ರಿಕೆಟಿಗರ, ರಾಹುಲ್ ಗಾಂಧಿ, ಸಿದ್ದರಾಮಯ್ಯ, ಬಸವರಾಜ್ ಬೊಮ್ಮಾಯಿ ಸೇರಿದಂತೆ ಬಹುತೇಕ ಎಲ್ಲ ರಾಜಕಾರಣಿಗಳ ಹಾಗೂ ಅಮಿತಾಭ್ ಬಚ್ಚನ್ ಸೇರಿದಂತೆ ಬಹುತೇಕ ಸಿನಿತಾರೆಯರ ಖಾತೆಯ ಬ್ಲೂಟಿಕ್ ಆಯ್ಕೆಯನ್ನು ಟ್ವಿಟರ್ ತೆಗೆದಿದೆ. ಪ್ರಧಾನಿ ನರೇಂದ್ರ ಮೋದಿ ಖಾತೆಯಲ್ಲಿ ಟ್ವಿಟರ್ ವೆರಿಫೈಡ್ ಆಯ್ಕೆಯು ಹಾಗೇ ಉಳಿದುಕೊಂಡಿದೆ. ಪ್ರಧಾನಿಯ ಟ್ವಿಟರ್ ಖಾತೆಯನ್ನು ಸರ್ಕಾರಿ ಸಂಸ್ಥೆಯದ್ದೆಂದು ಕಂಪನಿಯು ಪರಿಗಣಿಸಿರುವ ಕಾರಣಕ್ಕೆ ಅವರ ಖಾತೆಯಲ್ಲಿ ವೆರಿಫೈಡ್ ಆಯ್ಕೆಯನ್ನು ಹಾಗೆಯೇ ಉಳಿಸಲಾಗಿದೆ.

ಗಣ್ಯರ ಪ್ರೊಫೈಲ್‌ಗಳಿಂದ ನೀಲಿ ಚಿಹ್ನೆಯನ್ನು




ತೆಗೆದು ಹಾಕಲು ಕಾರಣ ಟ್ವಿಟರ್‌ನ ಹೊಸ ನಿಯಮ. ನೀಲಿ ಬ್ಯಾಡ್ಜ್ ಉಳಿಸಿಕೊಳ್ಳಲು ಬಳಕೆದಾರರು ಚಂದಾದಾರಿಕೆಯನ್ನು ಪಡೆಯಬೇಕು. ಚಂದಾದಾರಿಕೆ ಪಡೆಯದ ಕಾರಣಕ್ಕೆ ಬ್ಲೂಟಿಕ್ ಆಯ್ಕೆ ತೆಗೆಯಲಾಗಿದೆ.

ಏಪ್ರಿಲ್ 1ರಿಂದಲೇ ಲೆಗಸಿ ಬ್ಲೂ ಟಿಕ್‌ಗಳನ್ನು ತೆಗೆದುಹಾಕುವ ಯೋಜನೆಯನ್ನು ಟ್ವಿಟರ್ ಪ್ರಕಟಿಸಿತ್ತು. ಆದರೆ, ಆಯ್ದ ಖಾತೆಗಳಿಗೆ ಇದು ಅನ್ವಯಿಸದು ಎಂದೂ ಕಂಪನಿಯು ಸ್ಪಷ್ಟಪಡಿಸಿತ್ತು.

ಆದರೀಗ ಚಂದಾದಾರರಲ್ಲದ ಎಲ್ಲಾ ಖಾತೆಗಳಿಂದಲೂ ನೀಲಿ ಚಿಹ್ನೆಯನ್ನು ತೆಗೆಯುವ ನಿರ್ಧಾರವನ್ನು ಕೈಗೊಂಡಿರುವ ಕಂಪನಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, 'ಖಾತೆಯ ದೃಢೀಕರಣಕ್ಕಾಗಿ ನೀಲಿ ಚಿಹ್ನೆ ಅವಶ್ಯವಾಗಿದ್ದು, ಈ ನೀಲಿ ಚಿಹ್ನೆ ಪಡೆಯಲು ನಿಗದಿತ ಶುಲ್ಕವನ್ನು ಪಾವತಿ ಮಾಡಲೇಬೇಕು' ಎಂಬ ಸಂದೇಶ ಹೊರಡಿಸಿದ್ದಾರೆ.

ಟ್ವಿಟರ್ ಬ್ಲೂ ಆಯ್ಕೆಯನ್ನು ಆ್ಯಂಡ್ರಾಯ್ಡ್ ಹಾಗೂ ಐಒಎಸ್ ಡಿವೈಸ್ ಎರಡರಲ್ಲೂ ಬಳಸಬಹುದಾಗಿದೆ. ಟ್ವಿಟರ್ ವೆಬ್‌ಸೈಟ್ ಬಳಸುವವರು ಕೂಡ ಬ್ಲೂ ಚೆಕ್‌ಮಾರ್ಕ್ ಖರೀದಿಸಬಹುದು. ಐಒಎಸ್ ಹಾಗೂ ಆ್ಯಂಡ್ರಾಯ್ಡ್ ಬಳಕೆದಾರರಿಗೆ ಬ್ಲೂಟಿಕ್ ಮಾರ್ಕ್ ಪಡೆಯಲು ಮಾಸಿಕ ಚಂದಾದಾರಿಕೆ ಶುಲ್ಕವಾಗಿ ₹900 ಹಾಗೂ ವೆಬ್ ಬಳಕೆದಾರರು ₹650 ಪಾವತಿಸಬೇಕಿದೆ. ವಾರ್ಷಿಕ ಚಂದಾದಾರಿಕೆಗೆ ₹6,800 ಪಾವತಿಸಬೇಕಿದೆ. ■